ಕರ್ನಾಟಕ ಸರಕಾರ

**ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಮಂಗಳೂರು ವಿಭಾಗ, ಲೋಕೋಪಯೋಗಿ ಬಹುಮಹಡಿ ಕಟ್ಟಡ, ನೆಹರು ಮೈದಾನದ ಎದುರು, ಮಂಗಳೂರು – 575001**

**ಫೋನ್:0824–2423913, ಫ್ಯಾಕ್ಸ್–0824–2411242**

**email:** dcf_mngt@yahoo.co.in, **dcfmng@aranya.gov.in**

ಸಂಖ್ಯೆ:ಆಯವ್ಯಯ:ವಿವ:10(6):ನಗರ ಹಸುರೀಕರಣ/ರಸ್ತೆಬದಿ/ಇ–ಟೆಂಡರ್/2019–20 ದಿನಾಂಕ : 24–04–2019

## ಅಲ್ಪಾವಧಿ ಇ–ಟೆಂಡರ್ ಅಧಿಸೂಚನೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ **2019–20ನೇ ಸಾಲಿನಲ್ಲಿ ಮಂಗಳೂರು ವಿಭಾಗದ ವ್ಯಾಪ್ತಿಗೊಳಪಡುವ ವಿವಿಧ ವಲಯಗಳಲ್ಲಿ ನಗರ ಹಸುರೀಕರಣ/ರಸ್ತೆಬದಿ ನೆಡುತೋಪು ಯೋಜನೆಯಡಿ ಹೊಂಡ ಮಾಡಿ ಸಸಿ ನೆಟ್ಟು ನೆಡುತೋಪು ಬೆಳೆಸುವ ಕಾಮಗಾರಿಗಳನ್ನು** ನಿರ್ವಹಿಸಲು ನೊಂದಾಯಿತ ಅರಣ್ಯ ಗುತ್ತಿಗೆದಾರರಿಂದ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್ ಪೋರ್ಟಲ್ www.eprockarnataka.gov.in ಮೂಲಕ ಅಲ್ಪಾವಧಿ ಇ–ಟೆಂಡರ್‌ನ್ನು ಅಹ್ವಾನಿಸಲಾಗಿದೆ.

### ಅನುಸೂಚಿ

| Sl No. | Budget Head | Range | Nature of Work | Name of the Location | Extent | | Amount | EMD |
|---|---|---|---|---|---|---|---|---|
| 1 | **2406-01-101-Forest Conservation , Development & Regeneration -2-Other Scheme -83-Afforestation on Forest & Non -Forest Area -139-Major Works (Greening of Urban Area)"** | Mangalore | **Pitting and planting during monsoon 2019** | Range jurisdiciton | 10 | Km | 1,774,000 | 44,350 |
| 2 | | Bantwal | | Range jurisdiciton | 5 | Km | 887,000 | 22,175 |
| 3 | | Belthangady | | Range jurisdiciton | 5 | Km | 887,000 | 22,175 |
| 4 | | Puttur | | Range jurisdiciton | 5 | Km | 887,000 | 22,175 |
| 5 | | Sullia | | Range jurisdiciton | 4 | Km | 709,600 | 17,740 |
| 6 | | Panja | | Range jurisdiciton | 3 | Km | 532,200 | 13,305 |
| | | | | **Total** | **32** | | **5,676,800** | **141,920** |
| 1 | **2406-01-101-Forest Conservation , Development & Regeneration -2-Other Scheme -83-Afforestation on Forest & Non -Forest Area -139-Major Works (Roadside Plantation )"** | Mangalore | | Range jurisdiction | 10 | Km | 1,870,000 | 46,750 |
| 2 | | Uppinangady | | Pallithadka to Hennaje | 2 | Km | 374,000 | 9,350 |
| 3 | | Uppinangady | | Bavalikadu to Anaru | 5 | Km | 935,000 | 23,375 |
| 4 | | Uppinangady | | Koppadadka to Bandaru | 2 | Km | 374,000 | 9,350 |
| 5 | | Uppinangady | | Keyyooru to Nekkare | 3 | Km | 561,000 | 14,025 |
| | | | | **Total** | **22** | | **4,114,000** | **102,850** |

ಟೆಂಡರನ್ನು ಇ–ಪೋರ್ಟಲ್‌ನಲ್ಲಿ ಸಲ್ಲಿಸಲು ಕೊನೆಯ ದಿನಾಂಕ: **06–05–2019** ಅಪರಾಹ್ನ 5.00 ಗಂಟೆಗೆ ತಾಂತ್ರಿಕ ಬಿಡ್‌ನ್ನು ಮತ್ತು ಆರ್ಥಿಕ ಬಿಡ್‌ನ್ನು ತೆರೆಯುವ ಸಮಯ ದಿನಾಂಕ:**08–05–2019** ರಂದು ಅಪರಾಹ್ನ 5.00 ಗಂಟೆಗೆ ನಿಗದಿಪಡಿಸಲಾಗಿದೆ.

ಒಂದು ವೇಳೆ ಮೇಲೆ ಹೇಳಿದ ದಿನಾಂಕದಂದು ಯಾವುದೇ ಗುತ್ತಿಗೆದಾರರು ಟೆಂಡರ್ ಹಾಕದಿದ್ದಲ್ಲಿ ಇದೇ ಇ–ಟೆಂಡರ್ ಪ್ರಕ್ರಿಯೆಯನ್ನು ಮುಂದುವರಿಸಿ ಮರು ಟೆಂಡರನ್ನು ಇ–ಪೋರ್ಟಲ್‌ನಲ್ಲಿ ಸಲ್ಲಿಸಲು ಕೊನೆಯ ದಿನಾಂಕ:**09–05–2019** ರಂದು ಅಪರಾಹ್ನ 5.00 ಗಂಟೆಗೆ, ತಾಂತ್ರಿಕ ಬಿಡ್‌ನ್ನು ಮತ್ತು ಆರ್ಥಿಕ ಬಿಡ್‌ನ್ನು ತೆರೆಯುವ ಸಮಯ ದಿನಾಂಕ:**10–05–2019** ರಂದು ಅಪರಾಹ್ನ 5.00 ಗಂಟೆಗೆ ಮತ್ತು ಮರುಟೆಂಡರನ್ನು ಷರತ್ತುಗಳ ಬಗ್ಗೆ ಹಾಗೂ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ ಮತ್ತು ಇ–ಮೇಲ್ ಮೂಲಕ ವೆಬ್‌ಸೈಟ್ ವಿಳಾಸ www.eprockarnataka.gov.in ರಲ್ಲಿ ಪಡೆಯಬಹುದು.

**ಷರತ್ತುಗಳು:**

1. ಇ.ಎಂ.ಡಿ ಗಳು ಇ–ಪೋರ್ಟಲ್ ನಲ್ಲಿ ತಿಳಿಸಿರುವ ಯಾವುದಾದರೂ ಒಂದು ರೀತಿಯಲ್ಲಿರತಕ್ಕದ್ದು ಮತ್ತು ಅವುಗಳ ಚಲಾವನೆ ಟೆಂಡರ್ ತೆರೆಯುವ ದಿನಾಂಕದಿಂದ ಕನಿಷ್ಠ 60 ದಿನಗಳವರೆಗೆ ಇರತಕ್ಕದ್ದು.
2. ಟೆಂಡರ್‌ದಾರರು ಅವರ ಪೂರ್ತಿ ಹೆಸರು, ಸರಿಯಾದ ಅಂಚೆ ವಿಳಾಸ ಸಂಪರ್ಕಿಸಬಹುದಾದ ದೂರವಾಣಿ ಸಂಖ್ಯೆ ವಯಸ್ಸು ಮತ್ತು ಇತರ ಎಲ್ಲಾ ರೀತಿಯ ಪೂರ್ಣ ಮಾಹಿತಿಗಳನ್ನು ಟೆಂಡರ್ ಫಾರಂನಲ್ಲಿ ನಮೂದಿಸಿರತಕ್ಕದ್ದು.
3. **ಟೆಂಡರಿಗಿಟ್ಟಿರುವ ನೆಡುತೋಪು ಕೆಲಸ ವಿಶೇಷ ತಾಂತ್ರಿಕ ಮಾದರಿಯ ಕೆಲಸಗಳಾಗಿದ್ದು ಈ ಕೆಲಸಗಳನ್ನು ನಿರ್ವಹಿಸಲು ಟೆಂಡರಿನಲ್ಲಿ ಭಾಗವಹಿಸುವವರು ಅರಣ್ಯೀಕರಣ ಕಾಮಗಾರಿಗಳನ್ನು ನಿರ್ವಹಿಸಿ ಅನುಭವವಿರುವ ಬಗ್ಗೆ ಅಗತ್ಯ ದೃಢೀಕರಣ ಪತ್ರಗಳನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಅಥವಾ ಅವರ ದರ್ಜೆಗಿಂತ ಹೆಚ್ಚಿನ ದರ್ಜೆಯ ಅಧಿಕಾರಿಗಳಿಂದ ಪಡೆದ ಹಿಂದಿನ 5 ವರ್ಷಗಳ ಪ್ರಮಾಣ ಪತ್ರದ ದೃಢೀಕೃತ ಪ್ರತಿಯನ್ನು ಟೆಂಡರ್ ದಾಖಲೆಗಳೊಂದಿಗೆ ಸಲ್ಲಿಸತಕ್ಕದ್ದು.**
4. **ಋತುಮಾನಕ್ಕನುಗುಣವಾಗಿ ಮಳೆ ಆಧಾರದ ಮೇಲೆ ನಿರ್ವಹಿಸಬೇಕಾದ ನೆಡುತೋಪು ಕಾಮಗಾರಿಗಳಾದ್ದರಿಂದ, ಟೆಂಡರಿಗಿಟ್ಟಿರುವ ಕಾಮಗಾರಿಗಳಲ್ಲಿ ಯಾವುದಾದರೂ ಕಾಮಗಾರಿಗಳನ್ನು ಪೂರ್ಣವಾಗಿ / ಭಾಗಶ:ವಾಗಿ ಕಾಮಗಾರಿಗಳನ್ನು ಇಲಾಖಾ ಮೂಲಕ ಕೈಗೊಂಡಿದ್ದಲ್ಲಿ ಅಂತಹ ಕಾಮಗಾರಿಗಳನ್ನು ಟೆಂಡರ್ ಪ್ರಕ್ರಿಯೆಯಿಂದ ಹೊರತುಪಡಿಸಲಾಗುವುದು.**
5. **ಟೆಂಡರಿನಲ್ಲಿ ನಮೂದಿಸಿದ ಕಾಮಗಾರಿಗಳಿಗೆ ಅನುದಾನ ಬಿಡುಗಡೆಯಾಗುವ ನಿರೀಕ್ಷೆ (Subject to the availability of Funds)ಯಲ್ಲಿ ಟೆಂಡರ್ ಕರೆಯಲಾಗಿರುತ್ತದೆ. ಸದ್ರಿ ಕಾಮಗಾರಿಗಳಿಗೆ ಅನುದಾನ ಬಿಡುಗಡೆಯಾದಲ್ಲಿ ಮಾತ್ರ ಕಾರ್ಯಾದೇಶ ನೀಡಲಾಗುವುದು. ಅನುದಾನ ಬಿಡುಗಡೆಯಾಗದಿದ್ದಲ್ಲಿ ಟೆಂಡರನ್ನು ರದ್ದುಗೊಳಿಸುವ ಅಧಿಕಾರ ಈ ಕೆಳ ಸಹಿದಾರರು ಹೊಂದಿರುವುದಾಗಿದೆ.**
6. ಪಾಲುದಾರಿಕೆಯಲ್ಲಾಗಲೀ / ಸಂಘ ಸಂಸ್ಥೆಗಳ ಹೆಸರಿನಲ್ಲಾಗಲೀ ಟೆಂಡರ್‌ಗಳನ್ನು ಸಲ್ಲಿಸುವಾಗ ಸಂಸ್ಥೆಯ ಎಲ್ಲಾ ಪಾಲುದಾರರಿಂದ / ಸಂಸ್ಥೆಯಿಂದ ಅಧಿಕಾರ ಪಡೆದ ವ್ಯಕ್ತಿಯು ಜನರಲ್ ಪವರ್ ಆಫ್ ಅಟಾರ್ನಿಯನ್ನು ಸಂಬಂಧಿಸಿದವರಿಂದ ಪಡೆದಿರಬೇಕು, ಸದರಿ ಜನರಲ್ ಪವರ್ ಆಫ್ ಅಟಾರ್ನಿ ಪತ್ರದೊಂದಿಗೆ ಪಾಲುದಾರರ ಸಂಪೂರ್ಣ ಹೆಸರು ಮತ್ತು ವಿಳಾಸವಿರುವ ವಿವರ ಪಾಲುದಾರಿಕೆಯ ಪ್ರಮಾಣವನ್ನು ಸ್ಪಷ್ಟವಾಗಿ ನಮೂದಿಸಿರಬೇಕು, ಸಂಸ್ಥೆಯ ನೊಂದಾಯಿತ ಪತ್ರದ ನಕಲನ್ನು ನ್ಯಾಯಾಧೀಶರು / ಪತ್ರಾಂಕಿತ ಅಧಿಕಾರಿ ಇವರಿಂದ ದೃಢೀಕರಿಸಿರುವ ನೊಂದಾಯಿತ ಪತ್ರದ ನಕಲನ್ನು ಲಗತ್ತಿಸಿರಬೇಕು.
7. ಟೆಂಡರನ್ನು/ಭಾಗಶ: ಟೆಂಡರನ್ನು ಅಥವಾ ಪೂರ್ಣ ಎಲ್ಲಾ ಟೆಂಡರನ್ನು ಅಂಗೀಕರಿಸುವುದಾಗಲೀ ಮತ್ತು ಅತೀ ಕಡಿಮೆ ಸೂಚಿಸಿದ ಟೆಂಡರನ್ನು ಯಾವುದೇ ಕಾರಣವನ್ನು ನೀಡದೇ ತಿರಸ್ಕರಿಸುವ ಹಕ್ಕನ್ನು ಈ ಕೆಳಸಹಿದಾರರು ಕಾಯ್ದಿರಿಸಿಕೊಂಡಿರುತ್ತಾರೆ.
8. ಟೆಂಡರ್‌ನ ಫಲಿತಾಂಶವನ್ನು ಅನುಮೋದನೆಗಾಗಿ ಅಧಿಕಾರವಿರುವ, ಸಂಬಂಧಿಸಿದ ಅಧಿಕಾರಿಗಳ ಅವಗಾಹನೆಗೆ ಸಲ್ಲಿಸಲಾಗುವುದು ಹಾಗೂ ಫಲಿತಾಂಶವನ್ನು ಯಶಸ್ವಿ ಟೆಂಡರ್‌ದಾರರಿಗೆ ಅಂಚೆ / ಇ–ಮೇಲ್ ಮೂಲಕ ತಿಳಿಸಲಾಗುವುದು, ಸಕ್ಷಮ ಪ್ರಾಧಿಕಾರದಿಂದ ಟೆಂಡರ್‌ನ ಫಲಿತಾಂಶದ ಬಗ್ಗೆ ಆದೇಶ ಬರುವ ತನಕ ಮೊದಲನೇ ಮತ್ತು ಎರಡನೇ ಕಡಿಮೆ ದರ ನಮೂದಿಸಿರುವ ಟೆಂಡರ್‌ದಾರರ ಇ.ಎಂ.ಡಿ. ಹಣವನ್ನು ಹಿಂದಿರುಗಿಸಲಾಗುವುದಿಲ್ಲ.
9. ಯಶಸ್ವಿ ಟೆಂಡರ್‌ದಾರರು, ಟೆಂಡರ್ ಅಂಗೀಕಾರವಾದ ಪತ್ರ ಸ್ವೀಕರಿಸಿದ ಏಳು ದಿನಗಳೊಳಗಾಗಿ ರೂ.200/– ಮುಖ ಬೆಲೆಯ ಛಾಪಾ ಕಾಗದದಲ್ಲಿ ಗುತ್ತಿಗೆ ಕರಾರು ಒಪ್ಪಂದ ಮಾಡಿಕೊಳ್ಳುವುದರ ಜೊತೆಗೆ ಚಾಲ್ತಿ ವರ್ಷದ ಆದಾಯ ತೆರಿಗೆ ಮಾರಾಟ ತೆರಿಗೆ ತೀರುವಳಿ ಪತ್ರಗಳನ್ನು ಕರಾರು ಒಪ್ಪಂದದ ಸಮಯದಲ್ಲಿ ಹಾಜರು ಪಡಿಸತಕ್ಕದ್ದು.
10. ಯಶಸ್ವಿ ಟೆಂಡರ್‌ದಾರರು ಟೆಂಡರ್ ಮೊತ್ತದ ಶೇ.5ರಷ್ಟು ಭದ್ರತಾ ಠೇವಣಿಯನ್ನು ಕರಾರುನಾಮೆ ಮಾಡುವ ದಿನದಂದು ರಾಷ್ಟ್ರೀಕೃತ ಬ್ಯಾಂಕಿನಿಂದ ಡಿ.ಡಿಯನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಮಂಗಳೂರು ವಿಭಾಗ, ಮಂಗಳೂರು ರವರ ಹೆಸರಿಗೆ ಪಡೆದು ಹಾಜರು ಪಡಿಸತಕ್ಕದ್ದು ಕಾಮಗಾರಿಯನ್ನು ತೃಪ್ತಿಕರವಾಗಿ ಪೂರ್ಣಗೊಳಿಸಿದ ಬಗ್ಗೆ ವಲಯ ಅರಣ್ಯಾಧಿಕಾರಿ ಮತ್ತು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯವರು ದೃಢೀಕರಿಸಿ ಕಾರ್ಯ ಸಮಾಪನಾ ವರದಿಯನ್ನು ಸಲ್ಲಿಸಿದ ನಂತರ ಸದ್ರಿ ಭದ್ರತಾ ಠೇವಣಿಯನ್ನು ಆರು ತಿಂಗಳ ನಂತರ ಹಿಂದಿರುಗಿಸಲಾಗುವುದು.

11. ಟೆಂಡರ್‌ದಾರರು ಒಂದು ವೇಳೆ ಕೆಲಸ ನಿರ್ವಹಿಸಲು ನಿಗದಿತ ಅವಧಿಯೊಳಗೆ ಕರಾರು ಪತ್ರವನ್ನು ಮಾಡಿಕೊಳ್ಳದೇ ಇದ್ದಲ್ಲಿ, ಅವರ ಭದ್ರತಾ ಠೇವಣಿಯನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಹಾಗೂ ಮೂಲ ಗುತ್ತಿಗೆದಾರರ ಹೊಣೆಗಾರಿಕೆ ಮತ್ತು ಜವಾಬ್ದಾರಿಯ ಮೇರೆಗೆ ಎರಡನೇ ಕಡಿಮೆ ಟೆಂಡರ್‌ದಾರರ ಮೂಲಕವಾಗಲೀ ಅಥವಾ ಇಲಾಖೆ ಮೂಲಕವಾಗಲೀ ಸಂದರ್ಭಕ್ಕೆ ತಕ್ಕಂತೆ ಕಾಮಗಾರಿಯನ್ನು ನಿರ್ವಹಿಸಲಾಗುವುದು. ಈ ರೀತಿ ಕಾಮಗಾರಿ ನಿರ್ವಹಿಸಿದ ಸಮಯದಲ್ಲಿ ಸರ್ಕಾರಕ್ಕೆ ಆಗುವ ನಷ್ಟವನ್ನು ಕರ್ನಾಟಕ ಅರಣ್ಯ ಅಧಿ ನಿಯಮ 1963 ಸೆಕ್ಷನ್ 109 ಮತ್ತು 112ರ ಪ್ರಕಾರ ಅರಿಯರ್ಸ್ ಆಫ್ ಲ್ಯಾಂಡ್ ರೆವಿನ್ಯೂ ಎಂದು ಪರಿಗಣಿಸಿ ಮೂಲ ಟೆಂಡರ್‌ದಾರರಿಂದ ಸದರಿ ನಷ್ಟದ ಮೊತ್ತವನ್ನು ವಸೂಲಿ ಮಾಡಲಾಗುವುದು, ಲಾಭಕ್ಕೆ ಮೂಲ ಟೆಂಡರ್‌ದಾರರು ಪಾಲುದಾರರಲ್ಲ. ಇಂತಹ ಅನರ್ಹಗೊಂಡ ಗುತ್ತಿಗೆದಾರರರ ಹೆಸರನ್ನು ಕಪ್ಪು ಪಟ್ಟಿಗೆ ಸೇರಿಸುವುದರೊಂದಿಗೆ ಅರಣ್ಯ ಗುತ್ತಿಗೆದಾರರ ಹೆಸರನ್ನು ಗುತ್ತಿಗೆದಾರರ ಪಟ್ಟಿಯಿಂದ ಕೈ ಬಿಡಲಾಗುವುದು.
12. ಗುತ್ತಿಗೆದಾರರಿಗೆ ಯಾವುದೇ ರೀತಿಯ ಮುಂಗಡ ಹಣವನ್ನು ಕೆಲಸಕ್ಕಾಗಲೀ ಅಥವಾ ಸಾಮಾಗ್ರಿ ಖರೀದಿಗಾಗಲೀ ನೀಡಲಾಗುವುದಿಲ್ಲ.
13. ಗುತ್ತಿಗೆದಾರರು ನಿರ್ವಹಿಸಿದ ಕಾಮಗಾರಿಯನ್ನು ಸಂಬಂಧಪಟ್ಟ ವಲಯ ಅರಣ್ಯಾಧಿಕಾರಿಗಳು ಪರಿಶೀಲಿಸಿ ಅಳತೆ ತೆಗೆದುಕೊಳ್ಳುವರು ಮತ್ತು ಅಳತೆ ಪುಸ್ತಕದಲ್ಲಿ ನಮೂದಿಸುವರು ತದ ನಂತರ ಸಂಬಂಧಿಸಿದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ತಪಾಸಣೆ ನಡೆಸಿ ತಪಾಸಣೆಯ ಫಲಿತಾಂಶವನ್ನು ಅಳತೆಯ ಪುಸ್ತಕದಲ್ಲಿ ನಮೂದಿಸುವರು, ಈ ಅಳತೆಯನ್ನು ಅನುಮೋದಿಸಿದ ಬಗ್ಗೆ ಗುತ್ತಿಗೆದಾರರು ಅಳತೆ ಪುಸ್ತಕದಲ್ಲಿ ತಮ್ಮ ಸಹಿಯನ್ನು ಹಾಕತಕ್ಕದ್ದು, ಆ ನಂತರವೇ ಗುತ್ತಿಗೆದಾರರು ಬಿಲ್ಲನ್ನು ತಯಾರಿಸಿ ವಲಯ ಅರಣ್ಯಾಧಿಕಾರಿಗಳಿಗೆ ಸಲ್ಲಿಸತಕ್ಕದ್ದು, ವಲಯ ಅರಣ್ಯಾಧಿಕಾರಿಗಳು, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಅನುಮೋದನೆ ಪಡೆದು ಹಣ ಪಾವತಿಗಾಗಿ ವಿಭಾಗ ಕಚೇರಿಗೆ ಸಲ್ಲಿಸುವರು, ಉಪ ಅರಣ್ಯ ಸಂರಕ್ಷಣಾಧಿಕಾರಿ, ಮಂಗಳೂರು ವಿಭಾಗ, ಮಂಗಳೂರು ಇವರು ಸಹ ಕಾಮಗಾರಿಯನ್ನು ಸ್ವತ: ಪರಿಶೀಲಿಸಿದ ನಂತರ ಬಿಲ್ಲಿನ ಮೊತ್ತವನ್ನು ಅನುದಾನದ ಲಭ್ಯತೆಯ ಆಧಾರದ ಮೇಲೆ ಪಾವತಿಸಲಾಗುವುದು, ಈ ರೀತಿ ಪಾವತಿಸುವಾಗ ನಿಗಧಿತ ದರದಲ್ಲಿ ಆದಾಯ ತೆರಿಗೆ, ಮಾರಾಟ ತೆರಿಗೆ ರಾಯಲ್ಟಿ ಹಾಗೂ ಭದ್ರತಾ ಠೇವಣಿಯನ್ನು ಬಿಲ್ಲಿನಲ್ಲಿ ನಿಯಮಾನುಸಾರ ಕಟಾಯಿಸಲಾಗುವುದು, ಎಲ್ಲಾ ಕಾಮಗಾರಿಗಳ ಬಾಬ್ತು ಒಂದೇ ಬಿಲ್ಲನ್ನು ಕಾಮಗಾರಿ ಪೂರ್ಣಗೊಂಡ ನಂತರ ತಯಾರಿಸಿ ಸಲ್ಲಿಸತಕ್ಕದ್ದು ಭಾಗಶ: ಬಿಲ್ಲನ್ನು ಪಾವತಿಸಲಾಗುವುದಿಲ್ಲ.
14. ಗುತ್ತಿಗೆದಾರರು ನಿರ್ವಹಿಸುವ ಕೆಲಸದ ಪ್ರಗತಿಯು ತೃಪ್ತಿದಾಯಕವಾಗಿಲ್ಲವೆಂದು ಕಂಡುಬಂದಲ್ಲಿ ಗುತ್ತಿಗೆದಾರರಿಗೆ ಏಳು ದಿನಗಳ ಕಾಲಾವಧಿಯ ಲಿಖಿತ ನೋಟೀಸು ನೀಡಿ, ನಂತರ ಗುತ್ತಿಗೆಯನ್ನು ರದ್ದು ಪಡಿಸಿ, ಗುತ್ತಿಗೆದಾರರ ಜವಾಬ್ದಾರಿಯ ಮೇಲೆ ಎರಡನೇ ಕಡಿಮೆ ದರ ಸೂಚಿಸಿದ ಟೆಂಡರ್‌ದಾರರ ಮೂಲಕ ಅಥವಾ ಇಲಾಖಾ ಮುಖಾಂತರ ಕಾಮಗಾರಿಯನ್ನು ನಿರ್ವಹಿಸುವ ಬಗ್ಗೆ ಕ್ರಮ ತೆಗೆದುಕೊಳ್ಳಲು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಮಂಗಳೂರು ವಿಭಾಗ, ಮಂಗಳೂರು ರವರು ಅಧಿಕಾರವನ್ನು ಹೊಂದಿರುತ್ತಾರೆ.
15. ಒಂದು ವೇಳೆ ಗುತ್ತಿಗೆದಾರರಿಗೆ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಮಂಗಳೂರು ವಿಭಾಗ, ಮಂಗಳೂರು ಇವರೊಂದಿಗೆ ಪರಸ್ಪರ ಭಿನ್ನಾಭಿಪ್ರಾಯ ಉಂಟಾದಲ್ಲಿ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಮಂಗಳೂರು ವೃತ್ತ, ಮಂಗಳೂರು ಇವರ ತೀರ್ಮಾನವೇ ಅಂತಿಮ ತೀರ್ಮಾನವಾಗಿರುತ್ತದೆ.
16. ಕರ್ನಾಟಕ ಅರಣ್ಯ ಇಲಾಖೆಯ ಕಾಯಿದೆ ಕಾನೂನುಗಳ ಪ್ರಕಾರ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಮಂಗಳೂರು ವಿಭಾಗ, ಮಂಗಳೂರು ಇವರು ಕೈಗೊಳ್ಳುವ ತೀರ್ಮಾನಗಳಿಗೆ ಗುತ್ತಿಗೆದಾರರು ಬದ್ಧರಾಗಿರತಕ್ಕದ್ದು.
17. ಅನುಸೂಚಿಯಲ್ಲಿ ತಿಳಿಸಿರುವ ಕಾಮಗಾರಿಯ ಪ್ರಮಾಣವು ಅಂದಾಜಿನದ್ದಾಗಿದ್ದು ಇದನ್ನು ಅಗತ್ಯ ಕಂಡು ಬಂದಾಗ ಬದಲಾವಣೆ ಮಾಡುವ ಹಕ್ಕನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಮಂಗಳೂರು ವಿಭಾಗ, ಮಂಗಳೂರು ಇವರು ಹೊಂದಿರುತ್ತಾರೆ.
18. ಟೆಂಡರ್‌ಗಾಗಿ ಪ್ರಕಟಪಡಿಸಿರುವ ಕಾಮಗಾರಿಗಳಲ್ಲಿ ಯಾವುದೇ ಕೆಲಸದ ಕಾಮಗಾರಿಯನ್ನು ಕಾಯ್ದಿರಿಸುವ ಹಾಗೂ ಕಾಮಗಾರಿ ನಿರ್ವಹಿಸುವ ಸಮಯದಲ್ಲಿ ಸಂದರ್ಭನುಸಾರ ಯಾವುದೇ ಕೆಲಸಗಳನ್ನು ಹೊಸದಾಗಿ ಸೇರಿಸುವ/ಬದಲಾಯಿಸುವ ಹಕ್ಕನ್ನು ಉಪ ಅರಣ್ಯ ಸಂರಕ್ಷಣಾದಿಕಾರಿಗಳು, ಮಂಗಳೂರು ವಿಭಾಗ, ಮಂಗಳೂರುರವರು ಹೊಂದಿರುತ್ತಾರೆ.
19. ಯಾವುದೇ ಕಾರಣವಿಲ್ಲದೆ ಟೆಂಡರ್‌ಗಾಗಿ ಪ್ರಕಟಪಡಿಸಿರುವ ಕಾಮಗಾರಿಗಳಲ್ಲಿ ಭಾಗಶ: ಅಥವಾ ಪೂರ್ಣ ಹಾಗೂ ಯಾವುದೇ ಕಾಮಗಾರಿಯನ್ನು ಕೈ ಬಿಡುವ ಅಧಿಕಾರವನ್ನು ಸಹ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಮಂಗಳೂರು ವಿಭಾಗ, ಮಂಗಳೂರುರವರು ಹೊಂದಿರುತ್ತಾರೆ.
20. ಟೆಂಡರ್‌ಗಾಗಿ ಪ್ರಕಟಪಡಿಸಿರುವ ಕಾಮಗಾರಿಗಳಲ್ಲಿ ಕಾಮಗಾರಿಗಳ ಸ್ಥಳದ ಬದಲಾವಣೆಯನ್ನು ಮಾಡುವ ಅಧಿಕಾರವನ್ನು ಉಪ ಅರಣ್ಯ ಸಂರಕ್ಷಣಾದಿಕಾರಿಗಳು, ಮಂಗಳೂರು ವಿಭಾಗ, ಮಂಗಳೂರು ರವರು ಹೊಂದಿರುತ್ತಾರೆ ಮತ್ತು ಇಂತಹ ಸಂದರ್ಭಗಳಲ್ಲಿ ಗುತ್ತಿಗೆದಾರರಿಗೆ ಹೆಚ್ಚುವರಿ ಹಣವನ್ನು ನೀಡಲಾಗುವುದಿಲ್ಲ.

21. ಗುತ್ತಿಗೆದಾರರು ಕೆಲಸದ ನಮೂನೆ ಕೆಲಸವನ್ನು ಪ್ರಾರಂಭಿಸಿದ ದಿನಾಂಕ, ಮುಕ್ತಾಯದ ದಿನಾಂಕದ ಚಾರ್ಟನ್ನು ಸ್ಥಳದಲ್ಲಿ ಪ್ರದರ್ಶಿಸತಕ್ಕದ್ದು.

22. ಕಾಮಗಾರಿಗೆ ಬೇಕಾಗುವ ಮಾದರಿ ಅಂದಾಜು ಪಟ್ಟಿ ಮುಂತಾದ ದಾಖಲಾತಿಗಳ ಅಧಿಕೃತ ಪ್ರತಿಗಳನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಮಂಗಳೂರು ವಿಭಾಗ, ಮಂಗಳೂರು ಇವರ ಕಚೇರಿಯಲ್ಲಿ ಕಚೇರಿ ಕೆಲಸದ ವೇಳೆಯಲ್ಲಿ ಟೆಂಡರ್ ದಾರರು ಪರಿಶೀಲಿಸಬಹುದಾಗಿದೆ ಹಾಗೇ ಪರಿಶೀಲನೆಗೆ ಪ್ರದರ್ಶಿಸಿದ ದಾಖಲಾತಿಗಳನ್ನು ಪರಿಶೀಲಿಸುವ ಕುರಿತು ಕಚೇರಿಯಲ್ಲಿ ಇಡಲಾಗಿರುವ ಪುಸ್ತಕದಲ್ಲಿ ಪರಿಶೀಲನೆ ನಡೆಸಿದ ದಿನಾಂದೊಂದಿಗೆ ಅವರ ಸಹಿ ಮಾಡುವುದು ಪ್ರದರ್ಶಿಸಿದ ಕೆಲಸದ ವಿವರವು ಅಂದಾಜಿನದ್ದಾಗಿರುತ್ತದೆ ಎಂಬುದನ್ನು ಟೆಂಡರ್‌ದಾರರು ತಿಳಿಯತಕ್ಕದ್ದು ಅಂದಾಜು ಪಟ್ಟಿ ಮತ್ತು ವಿನ್ಯಾಸದಂತೆ ಕಾಮಗಾರಿಗಳನ್ನು ನಿರ್ವಹಿಸತಕ್ಕದ್ದು ಹಾಗೂ ಕಾಮಗಾರಿ ಬಗ್ಗೆ ತಾಂತ್ರಿಕ ಪರಿಣಿತೆ ಹೊಂದಿದ ಉಸ್ತುವಾರಿದಾರರು ಮತ್ತು ಕೆಲಸಗಾರರನ್ನು ಮಾತ್ರ ನೇಮಿಸಿಕೊಳ್ಳತಕ್ಕದ್ದು.

23. ಗುತ್ತಿಗೆದಾರರು ಅವರ ಅಧೀನದಲ್ಲಿ ಕೆಲಸ ಮಾಡುವ ಕೆಲಸಗಾರರ ಯೋಗಕ್ಷೇಮ ನೋಡಿಕೊಳ್ಳುವುದು ಹಾಗೂ ಅಪಘಾತಗಳಿಗೆ ಪರಿಹಾರ ಕಾಯಿದೆ ಅನ್ವಯ ಪರಿಹಾರವನ್ನು ನೀಡಲು ಬದ್ಧರಾಗಿರಬೇಕು. ತಪ್ಪಿದಲ್ಲಿ ಸಂಬಂಧಿಸಿದವರಿಂದ ಆದೇಶವಾದ ಅಂತಹ ಪರಿಹಾರ ಮೊತ್ತವನ್ನು, ಕಾಮಗಾರಿ ನಿರ್ವಹಿಸಿದ ಬಾಬ್ತು ಟೆಂಡರ್‌ದಾರರು ಸಲ್ಲಿಸಿದ ಬಿಲ್ಲಿನಲ್ಲಿ ಕಟಾಯಿಸಿ ಅಪಘಾತಕ್ಕೆ ಒಳಗಾದ ವ್ಯಕ್ತಿಗೆ ಪಾವತಿಸಲಾಗುವುದು. ಕಾಮಗಾರಿಗೆ ಬಾಲಕಾರ್ಮಿಕರನ್ನು ನೇಮಿಸಿಕೊಳ್ಳುವುದನ್ನು ನಿಷೇಧಿಸಲಾಗಿದೆ. ಇಂತಹ ಪ್ರಕರಣಗಳು ಕಂಡುಬಂದಲ್ಲಿ ಬಾಲಕಾರ್ಮಿಕರ ರಕ್ಷಣಾ ಅಧಿನಿಯಮದನ್ವಯ ಗುತ್ತಿಗೆದಾರರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು.

24. ಗುತ್ತಿಗೆದಾರರು ತಮ್ಮ ಪ್ರತಿನಿಧಿ ಹಾಗೂ ಕಾರ್ಮಿಕರ ಯಾದಿಯನ್ನು, ಕಾರ್ಮಿಕರ ದೃಢೀಕರಿಸಿದ ಭಾವ ಚಿತ್ರದೊಂದಿಗೆ ಅವರುಗಳ ಅಂಚೆ ವಿಳಾಸ ನಮೂದಿಸಿ ಕಾಮಗಾರಿ ಪಾರಂಭಕ್ಕೆ ಮುಂಚೆಯೇ ಸಂಬಂಧಪಟ್ಟ ವಲಯ ಅರಣ್ಯಾಧಿಕಾರಿಗಳಿಗೆ ಸಲ್ಲಿಸತಕ್ಕದ್ದು. ಕಾಮಗಾರಿ ಸ್ಥಳದಲ್ಲಿ, ಕಾಮಗಾರಿ ನಿರ್ವಹಿಸುವ ಕಾರ್ಮಿಕರು ಅವರ ದೃಢೀಕೃತ ಭಾವಚಿತ್ರವುಳ್ಳ ಗುತ್ತಿಗೆದಾರರ ಸಹಿ ಇರುವ ಗುರುತಿನ ಚೀಟಿ ಹೊಂದಿರಬೇಕು. ಕಾಮಗಾರಿಯನ್ನು ಸಾಮಾನ್ಯ ಕೆಲಸದ ವೇಳೆಯಾದ ಬೆಳಿಗ್ಗೆ 9.00 ಗಂಟೆಯಿಂದ ಸಾಯಂಕಾಲ 5.00 ಗಂಟೆಯವರೆಗೆ ಮಾತ್ರ ನಿರ್ವಹಿಸತಕ್ಕದ್ದು.

25. ಗುತ್ತಿಗೆದಾರರು ಕಾಮಗಾರಿಗೆ ಉಪಯೋಗಿಸಲು ದಾಸ್ತಾನು ಮಾಡುವ ಎಲ್ಲಾ ರೀತಿಯ ಸರಕು ಸಾಮಗ್ರಿಗಳ, ಯಂತ್ರೋಪಕರಣಗಳ ಹಾಗೂ ವಾಹನಗಳ ಸಂಪೂರ್ಣ ಸುರಕ್ಷತೆಯನ್ನು ಗುತ್ತಿಗೆದಾರರೇ ನಿರ್ವಹಿಸತಕ್ಕದ್ದು. ಬೆಂಕಿ ಅಪಘಾತ, ಕಳ್ಳತನ ಮತ್ತಿತರ ಯಾವುದೇ ರೀತಿಯ ನಷ್ಟ ಉಂಟಾದಲ್ಲಿ ಟೆಂಡರ್‌ದಾರರೆ ಸಂಪೂರ್ಣ ಹೊಣೆಗಾರರಾಗಿರುತ್ತಾರೆ. ಇಲಾಖೆಯು ಟೆಂಡರ್‌ದಾರರ ಸಾಮಾಗ್ರಿ ಯಂತ್ರೋಪಕರಣಗಳ ಸುರಕ್ಷತೆಯ ಯಾವುದೇ ಹೊಣೆಯನ್ನು ಹೊರುವುದಿಲ್ಲ. ಹಾಗೂ ಯಾವುದೇ ರೀತಿಯ ಪರಿಹಾರವನ್ನು ಭರಿಸುವುದಿಲ್ಲ.

26. ಕಾಮಗಾರಿಗಳಿಗೆ ಸಂಬಂಧಿಸಿದ ವಾಹನಗಳ ಸಂಚಾರವನ್ನು ನಿಗಧಿಪಡಿಸಿದ ಮಾರ್ಗದಲ್ಲಿ ಹಾಗೂ ವೇಳೆಯಲ್ಲಿ ಮಾತ್ರ ಸಂಚರಿಸಲು ಅವಕಾಶವಿರುತ್ತದೆ ಮತ್ತು ಶಬ್ದ ಮಾಲಿನ್ಯ ಮಾಡದಂತಹ ವಾಹನಗಳನ್ನು ಮಾತ್ರ ಉಪಯೋಗಿಸಬೇಕು, ಶಬ್ದ ಮಾಲಿನ್ಯ ವಾಹನಗಳ ಪ್ರವೇಶವನ್ನು ನಿಷೇಧಿಸಿದೆ. ಕಾಮಗಾರಿ ಕೆಲಸದ ಸಮಯದಲ್ಲಿ ವನ್ಯ ಪ್ರಾಣಿಗಳಿಗಾಗಲೀ, ಪಕ್ಷಿಗಳಿಗಾಗಲೀ, ಮರ ಗಿಡಗಳಿಗಾಗಲೀ ಯಾವುದೇ ರೀತಿಯ ಹಾನಿಯಾಗದಂತೆ ಎಚ್ಚರ ವಹಿಸತಕ್ಕದ್ದು. ಕಾಮಗಾರಿ ಸ್ಥಳದಲ್ಲಿ ಅಥವಾ ಯಾವುದೇ ಮರಗಳನ್ನು ಕಡಿಯತಕ್ಕದ್ದಲ್ಲ ಹಾಗೂ ಅರಣ್ಯಕ್ಕೆ ಬೆಂಕಿ ಕೊಡುವುದನ್ನು ನಿಷೇಧಿಸಲಾಗಿದೆ. ಅರಣ್ಯ ಅಧಿನಿಯಮ 1963 ಅರಣ್ಯ ನಿಯಮಾವಳಿ 1969, ಅರಣ್ಯ ಸಂರಕ್ಷಣಾ ಕಾಯಿದೆ 1980, ವನ್ಯಜೀವಿ ಸಂರಕ್ಷಣಾ ಕಾಯಿದೆ 1972 ಹಾಗೂ ಕಾಲ ಕಾಲಕ್ಕೆ ಅರಣ್ಯ ಇಲಾಖೆಯಿಂದ ಹಾಗೂ ಸರ್ಕಾರದಿಂದ ಹೊರಡಿಸುವ ಆದೇಶಗಳು ಇವುಗಳಲ್ಲಿ ಕಲ್ಪಿಸಿರುವ ಅವಕಾಶಗಳನ್ನು ಗುತ್ತಿಗೆದಾರರು ಕಡ್ಡಾಯವಾಗಿ ಪಾಲಿಸತಕ್ಕದ್ದು.

27. ಟೆಂಡರ್‌ದಾರರು ಸಾಕಷ್ಟು ಹಣಕಾಸಿನ ಸೌಲಭ್ಯ ಹೊಂದಿದವರಾಗಿದ್ದು, ಇಲಾಖೆಯಿಂದ ಕೆಲಸ ಪೂರ್ಣಗೊಳಿಸುವ ಅವಧಿಯಲ್ಲಿ ಹಣಪಾವತಿಯಾಗಲು ವಿಳಂಭವಾದರೂ ಸಹ ಸದರಿ ಕೆಲಸವನ್ನು ನಿಗಧಿಪಡಿಸಿದ ಕಾಲಾವದಿಯೊಳಗೆ ಪೂರೈಸಲು ಸಮರ್ಥರಿರಬೇಕು. ಟೆಂಡರ್‌ನ್ನು ಸ್ವೀಕರಿಸುವ ಅಧಿಕಾರಿಗಳು, ಟೆಂಡರ್ ದರಕ್ಕೆ ಅನುಗುಣವಾಗಿ ಹೆಚ್ಚಿನ ಭದ್ರತಾ ಠೇವಣಿಯನ್ನು ನಿಗಧಿಪಡಿಸಿದ್ದಲ್ಲಿ, ಅಷ್ಟೂ ಮೊತ್ತದ ಭದ್ರತಾ ಠೇವಣಿಯನ್ನು ಕರಾರು ಪತ್ರ ಮಾಡಿಕೊಳ್ಳುವ ಸಮಯದಲ್ಲಿ ತುಂಬಿ / ಹಾಜರುಪಡಿಸಿ ಕರಾರು ಒಪ್ಪಂದದ ಪತ್ರವನ್ನು ಮಾಡಿಸಿಕೊಳ್ಳಲು ಬದ್ಧರಾಗಿರತಕ್ಕದ್ದು. ಹಾಗೂ ಈ ಮೊತ್ತವನ್ನು ಕಾಮಗಾರಿ ಪೂರ್ಣಗೊಂಡ ನಂತರ ಸಂಬಂಧಿಸಿದ ಅಧಿಕಾರಿಗಳ ಸಮಾಪನಾ ವರದಿ ಪಡೆದು ಹಿಂದಿರುಗಿಸಲಾಗುವುದು.

28. ಗುತ್ತಿಗೆದಾರರು ಗುತ್ತಿಗೆಯನ್ನು ಅಥವಾ ಗುತ್ತಿಗೆಯ ಯಾವುದೇ ಭಾಗವನ್ನು ಇತರರಿಗೆ ಉಪ ಗುತ್ತಿಗೆ ನೀಡುವಂತಿಲ್ಲ ಅಥವಾ ವರ್ಗಾಯಿಸುವಂತಿಲ್ಲ. ಗುತ್ತಿಗೆದಾರರ ಬೇಡಿಕೆಯಂತೆ ಗುತ್ತಿಗೆಯನ್ನು ಬೇರೆಯವರಿಗೆ ವರ್ಗಾಯಿಸಬೇಕಾದರೆ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಮಂಗಳೂರು ವೃತ್ತ, ಮಂಗಳೂರು ರವರ ಅನುಮತಿಯನ್ನು ಪಡೆದು ಗುತ್ತಿಗೆ ದರದ ಶೇಕಡಾ 10 ರಷ್ಟು ದರವನ್ನು ಸರ್ಕಾರಕ್ಕೆ ಜಮಾ ಮಾಡಿ ನಂತರ ವರ್ಗಾಯಿಸತಕ್ಕದ್ದು. ಈ ರೀತಿ ಉಪ ಗುತ್ತಿಗೆ ಪಡೆದವರು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಮಂಗಳೂರು ವಿಭಾಗ, ಮಂಗಳೂರು ಇವರಲ್ಲಿ ಪ್ರತ್ಯೇಕ ಕರಾರು ಪತ್ರವನ್ನು ಬರೆದು ಕೊಡತಕ್ಕದ್ದು.

29. ಕಾಮಗಾರಿಗಳನ್ನು ಸಮರ್ಪಕವಾಗಿ ಹಾಗೂ ತೃಪ್ತಿಕರವಾಗಿ ನಿರ್ವಹಿಸಿದ ಬಗ್ಗೆ ಸಂಬಂಧಪಟ್ಟ ವಲಯ ಅರಣ್ಯಾಧಿಕಾರಿಗಳಿಂದ ನಿಗಧಿತ ನಮೂನೆಯಲ್ಲಿ ಕಾಮಗಾರಿಯ ಸಮಾಪನಾ ವರದಿ ಬಂದನಂತರ ಭದ್ರತಾ ಠೇವಣಿಯನ್ನು ಗುತ್ತಿಗೆದಾರರಿಗೆ ಹಿಂದಿರುಗಿಸಲಾಗುವುದು. ಕಾಮಗಾರಿ ಮುಕ್ತಾಯಗೊಂಡ ಒಂದು ವರ್ಷದ ಒಳಗೆ, ನಿರ್ವಹಿಸಿದ ಕಾಮಗಾರಿಯಲ್ಲಿ ಏನಾದರೂ ನ್ಯೂನತೆ ಕಂಡುಬಂದಲ್ಲಿ, ಅಂತಹ ಕಾಮಗಾರಿಯನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಮಂಗಳೂರು ವಿಭಾಗ, ಮಂಗಳೂರು ಇವರ ಸೂಚನೆಯಂತೆ ಸರಿಪಡಿಸಿ ಕೊಡತಕ್ಕದ್ದು. ಒಂದು ವೇಳೆ ನ್ಯೂನತೆಯನ್ನು ಸರಿಪಡಿಸಿ ಕೊಡದಿದ್ದಲ್ಲಿ, ಗುತ್ತಿಗೆದಾರರು ಅರಣ್ಯ ಇಲಾಖೆಯ ಯಾವುದೇ ವಿಭಾಗದಲ್ಲಿ ಕೆಲಸ ನಿರ್ವಹಿಸುತ್ತಿದ್ದರೂ ಸಹ ಅಂತಹ ವಿಭಾಗಗಳಿಗೆ ಪತ್ರ ಬರೆದು, ಆಗಿರುವ ನಷ್ಟವನ್ನು ಗುತ್ತಿಗೆದಾರರ ಬಿಲ್ಲಿನಲ್ಲಿ ಕಟಾಯಿಸುವಂತೆಯೂ ಅಥವಾ ಅಲ್ಲಿ ಒದಗಿಸಿದ ಭದ್ರತಾ ಠೇವಣಿಯಿಂದ ವಸೂಲು ಮಾಡುವಂತೆಯೂ ಕ್ರಮ ತೆಗೆದುಕೊಳ್ಳಲಾಗುವುದು. ಭದ್ರತಾ ಠೇವಣಿಯನ್ನು ಹಿಂದಕ್ಕೆ ಪಡೆಯುವಾಗ ಸದರಿ ಷರತ್ತಿಗೆ ಒಪ್ಪಿ, ಈ ಬಗ್ಗೆ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಮಂಗಳೂರು ವಿಭಾಗ, ಮಂಗಳೂರು ಇವರಿಗೆ ಮುಚ್ಚಳಿಕೆ ಪತ್ರ ಬರೆದುಕೊಡತಕ್ಕದ್ದು.

30. ಗುತ್ತಿಗೆದಾರರು ಮೇಲೆ ಹೇಳಿದ ಎಲ್ಲಾ ಷರತ್ತುಗಳಿಗೂ ಬದ್ಧರಾಗಿರಬೇಕು. ಉಲ್ಲಂಘಿಸಿದಲ್ಲಿ ಅಂತಹವರ ಗುತ್ತಿಗೆಯನ್ನು ಭಾಗಶ: ಅಥವಾ ಪೂರ್ಣವಾಗಿ ರದ್ದುಗೊಳಿಸುವ, ಠೇವಣಿ ಮುಟ್ಟುಗೋಲು ಹಾಕಿಕೊಳ್ಳುವ/ಬಿಲ್ ಪಾವತಿ ತಡೆಹಿಡಿಯುವ ಅಧಿಕಾರ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಮಂಗಳೂರು ವಿಭಾಗ, ಮಂಗಳೂರು ಇವರಿಗೆ ಇರುತ್ತದೆ. ಹಾಗೂ ಉಲ್ಲಂಘನೆಯಿಂದ ಸರ್ಕಾರಕ್ಕೇನಾದರೂ ನಷ್ಟ ಸಂಭವಿಸಿದಲ್ಲಿ ಅದನ್ನು ಭದ್ರತಾ ಠೇವಣಿಯಿಂದ ಹೊಂದಾಣಿಕೆ ಮಾಡಿಕೊಳ್ಳಲಾಗುವುದು ಮತ್ತು ಹೆಚ್ಚುವರಿ ಮೊತ್ತವನ್ನು ಕಂದಾಯ ಬಾಕಿ ಎಂದು ವಸೂಲಿ ಮಾಡಲಾಗುವುದು.

31. ಈ ಕಾಮಗಾರಿ ಬಾಬ್ತು ಏನಾದರೂ ವಿವಾದ ಉಂಟಾದಲ್ಲಿ ಈ ವಿವಾದವು ಮಂಗಳೂರು ನಗರದ ನ್ಯಾಯಾಲಯದ ವ್ಯಾಪ್ತಿಗೆ ಸೀಮಿತವಾಗಿದೆ.

32. ಟೆಂಡರನ್ನು ಸಲ್ಲಿಸುವ ಅರಣ್ಯ ಗುತ್ತಿಗೆದಾರರು ಈ ರೀತಿಯ ಕೆಲಸಗಳನ್ನು ಮಾಡಿದ ಬಗ್ಗೆ ಅಥವಾ ಈ ರೀತಿಯ ಕೆಲಸಗಳನ್ನು ಮಾಡುವ ತಾಂತ್ರಿಕ ಸಾಮರ್ಥ್ಯದ ಬಗ್ಗೆ ಇಲಾಖಾ ಮುಖ್ಯಸ್ಥರು ಅರಣ್ಯ ಇಲಾಖೆ ಅಥವಾ ತೋಟಗಾರಿಕೆ ಇಲಾಖೆಯಿಂದ ಕಾಮಗಾರಿಗಳ ಅಧ್ಯಯನ ದೃಢೀಕರಣ / ಸ್ಪಷ್ಟ ಪುರಾವೆ / ದಾಖಲೆಗಳನ್ನು ಈ ಕೆಳಸಹಿದಾರರಿಗೆ ತೃಪ್ತಿಕರವಾಗಿರುವಂತೆ ಒದಗಿಸಬೇಕು.

33. ಗುತ್ತಿಗೆಯ ಈ ಷರತ್ತುಗಳಲ್ಲದೆ ಬೇರಾವುದೇ ಷರತ್ತನ್ನು ಕರಾರು ಪತ್ರಕ್ಕೆ ಯಾವುದೇ ಸಮಯದಲ್ಲಿ ಸೇರಿಸುವ ಹಕ್ಕನ್ನು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳು ಕಾಯ್ದಿರಿಸಿಕೊಂಡಿರುತ್ತಾರೆ.

34. ಯಾವುದೇ ಕಾರಣದಿಂದ ಕಾಲಾವಧಿಯನ್ನು ವಿಸ್ತರಿಸಲಾಗುವುದಿಲ್ಲ, ಒಂದು ವೇಳೆ ನಿಗಧಿತ ಕಾಲಾವಧಿಯೊಳಗೆ ಕಾಮಗಾರಿ ಪೂರ್ಣಗೊಳಿಸದಿದ್ದರೆ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ವಿಧಿಸುವ ದಂಡಕ್ಕೆ ಬದ್ಧರಾಗಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಂದ ಲಿಖಿತ ಕಾಲ ವಿಸ್ತರಣೆ ಆದೇಶ ಪಡೆದುಕೊಳ್ಳತಕ್ಕದ್ದು, ಕಾಲ ವಿಸ್ತರಣೆ ಪಡೆದಲ್ಲಿ ಬಿಲ್ಲಿನ ಮೊತ್ತದಲ್ಲಿ ಶೇ.5 ರಷ್ಟು ಮೊತ್ತವನ್ನು ಕಡಿತಗೊಳಿಸಲಾಗುವುದು. ಈ ಬಗ್ಗೆ ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ತೀರ್ಮಾನವೇ ಅಂತಿಮವಾದುದಾಗಿರುತ್ತದೆ.

35. ಭಾಗಶಃ ಕೆಲಸ/ಅಪೂರ್ಣ ಕಾಮಗಾರಿ ಮಾಡಿದ ಪ್ರಸಂಗದಲ್ಲಿ ಅಂತಹ ಭಾಗಶಃ /ಅಪೂರ್ಣ ಕಾಮಗಾರಿಗಳಿಗೆ ಯಾವುದೇ ಹಣ ಪಾವತಿ ಮಾಡುವುದಿಲ್ಲ ಅಲ್ಲದೆ ಟೆಂಡರುದಾರರ ಸ್ವಜವಾಬ್ದಾರಿಯ ಮೇಲೆ ಕಾಮಗಾರಿಯನ್ನು ಕಾನೂನಿನ್ವಯ ಕಾರ್ಯಗತಗೊಳಿಸಲಾಗುವುದು. ಅಲ್ಲದೆ ಸದರಿ ಗುತ್ತಿಗೆದಾರರ ಇ.ಎಂ.ಡಿ ಹಣವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

36. ಈ ಕರಾರಿನಿಂದ ಉದ್ಭವಿಸಬಹುದಾದಂತಹ ಯಾವುದೇ ವ್ಯಾಜ್ಯ ಅಥವಾ ವಿವಾದ ಕ್ಲೇಮುಗಳನ್ನು ಪರಿಹರಿಸಿಕೊಳ್ಳುವುದಕ್ಕಾಗಿ ಉಭಯ ಪಕ್ಷದವರು ಅಂತಹ ವಿವಾದವನ್ನು ಕರ್ನಾಟಕ ಆರ್‌ಬಿಟ್ರೇಶನ್ ಕೇಂದ್ರ (ದೇಶೀಯ ಮತ್ತು ಅಂತರ್ ದೇಶೀಯ), ನಿಯಮಗಳು, 2012ರ ಅಡಿಯಲ್ಲಿ ನೇಮಕಗೊಂಡ ಒಬ್ಬರು ಅಥವಾ ಹಲವು ಪಂಚಾಯತ್‌ದಾರರ ಮೂಲಕ ಪರಿಹರಿಸಲು ಒಪ್ಪಿಕೊಳ್ಳಲಾಗಿದೆ.

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಮಂಗಳೂರು ವಿಭಾಗ, ಮಂಗಳೂರು.